ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಜೊತೆಗೆ ಪತ್ರ ವ್ಯವಹಾರ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಬೀಡಿ ಕಾರ್ಮಿಕರು ಮೂರೂವರೆ ಲಕ್ಷ ಜನರು ಇದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನನ್ನ ಲೆಕ್ಕದಲ್ಲಿ ಐದೂವರೆ ಲಕ್ಷದಿಂದ ೬ ಲಕ್ಷ ಬೀಡಿ ಕಾರ್ಮಿಕರು ಇರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಷ್ಕರಗಳು, ಜಾತಾಗಳು ನಡೆಯುತ್ತವೆ, ಇದರಿಂದಾಗಿ ವಾರಕ್ಕೆ ಎರಡು ದಿವಸ ಕೆಲಸ ಸಿಗುತ್ತಿಲ್ಲ. ಇದರಿಂದ ಅವರಿಗೆ ಊಟಕ್ಕೆ ಗತಿ ಇಲ್ಲ. ಎಲ್ಲಾ ಕಡೆ ಬೀಡಿ ಕಾರ್ಮಿಕರು ಬೀದಿಯಲ್ಲಿ ಬಂದಿದ್ದಾರೆ. ವಾರಕ್ಕೆ ಐದಾರು ದಿವಸ ಕೆಲಸ ಸಿಗತಕ್ಕ ಕಡೆ ಈಗ ಎರಡು ದಿವಸ ಸಹ ಸಿಗುತ್ತಿಲ್ಲ. ಆದ್ದರಿಂದ ಬೀಡಿ ಕಾರ್ಮಿಕರಿಗೆ ಕೆಲಸವನ್ನು ಕೊಡತಕ್ಕ ಕೆಲಸವನ್ನು ಮಾಡಬೇಕು. ಮತ್ತೆ ಮಧ್ಯಪ್ರದೇಶದಿಂದ ಎಲೆಗಳು ಬರಲಿಲ್ಲವೆಂದು ಹೇಳುತ್ತೀರಿ. ಎಲೆಗಳನ್ನು ತರಿಸಿ ದೇಣಿಗಳು ಕಾರ್ಮಿಕರಿಗೆ ಸರಿಯಾಗಿ ಕೆಲಸ ಕೊಡುವ ವ್ಯವಸ್ಥೆಯಾಗಬೇಕು. ಈ ಕಾರ್ಮಿಕರ ಸಮಸ್ಯೆ ಬಹಳ ಗಂಭೀರವಾದ ಸಮಸ್ಯೆ ಆಗಿದೆ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ನಮ್ಮ ಜಿಲ್ಲೆಯಲ್ಲಿ ಎಲ್ಲಾ ಆಲ್ಲೋಲ ಕಲ್ಲೋಲ ಆಗುತ್ತಾ ಉಂಟು. ಈ ಬಗ್ಗೆ ಏನು ಏರ್ಪಾಡು ಮಾಡುತ್ತೀರಿ ? ಕಾರ್ಮಿಕರಿಗೆ ವಾರದಲ್ಲಿ ಸ್ಥಾಲ್ಕೃದು ದಿವಸ ಕೆಲಸ ಸಿಗುವ ವ್ಯವಸ್ಥೆಯನ್ನು ಮಾಡುತ್ತೀರಾ ಹೇಗೆ ?

ಶ್ರೀ ಬಿ. ಶಿವಣ್ಣ.—ಆದನ್ನು ಪರಿಶೀಲನೆ ಮಾಡುತ್ತೇನೆಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದರೆ ಏನು ? ಇದು ಬೀಡಿ ಕಾರ್ಮಿಕರ ಪ್ರಶ್ನೆ. ಆದ್ದರಿಂದ ಒಂದು ಸಮಾಧಾನಕರವಾದ ಉತ್ತರ ಕೊಡಿ.

ಶ್ರೀ ಬಿ. ಶಿವಣ್ಣ.—ನಾನು ಈ ಬಗ್ಗೆ ವಿಧಾನ ಪರಿಷತ್‌ನಲ್ಲಿ ಉತ್ತರ ಕೊಟ್ಟಿದ್ದೇನೆ. ಇದೇ ಪ್ರಶ್ನೆಗೆ ನಾನು ಆಗಲೇ ಉತ್ತರ ಕೊಟ್ಟಿರುವ ಕಾರಣ...

ಅಧ್ಯಕ್ಷರು.—ಮಾನ್ಯ ಸಚಿವರು ಆ ಸದನದ ಪ್ರಶ್ನೆಗೆ ಆ ಸದನದಲ್ಲಿ ಉತ್ತರ ಕೊಡಿ. ಈ ಸದನದಲ್ಲಿ ಕೇಳಿದ ಪ್ರಶ್ನೆಗೆ ಇಲ್ಲಿ ಉತ್ತರ ಕೊಡಬೇಕು. ಈಗ ಈ ಸದನದಲ್ಲಿ ಪ್ರಶ್ನೆ ಕೇಳುತ್ತಿದ್ದಾರೆ. ಅವರಿಗೆ ಇಲ್ಲಿ ಉತ್ತರ ಕೊಡಿ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ಇದು ಸರ್ಕಾರದ ಗಮನಕ್ಕೆ ಬಂದಿದೆ.....

ಶ್ರೀ ವಾಟಾಳ್ ನಾಗರಾಜ್.—ಇಂತಹ ಮಾದರಿ ಸಚಿವರು ಇದುವರೆಗೂ ಬಂದಿರಲಿಲ್ಲ.

MR. SPEAKER.—Let us be considerate to him. ತಾವು ಉತ್ತರ ಕೊಡಿ.

ಶ್ರೀ ಬಿ. ಶಿವಣ್ಣ.—ಈ ಬೀಡಿ ಕಾರ್ಮಿಕರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕೂಡಲೇ ಕ್ರಮತೆಗೆದುಕೊಳ್ಳುತ್ತೇನೆ ಮತ್ತು ಕೇಂದ್ರಸರ್ಕಾರಕ್ಕೆ ಕೂಡ ಪತ್ರ ಬರೆದು ತಿಳಿಸುತ್ತೇವೆ. ರಾಜ್ಯಸರ್ಕಾರ ಏನು ಸಹಾಯ ಬೇಕೋ ಆದನ್ನು ಮಾಡುತ್ತದೆ ಎಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಅಧ್ಯಕ್ಷರು.—ನೀವು ಡೆಲ್ಲಿಗೆ ಹೋಗಿದ್ದಾಗ ಏನಾದರೂ ಈ ವಿಚಾರ ಮಾತನಾಡಿದ್ದೀರಾ ಹೇಗೆ ?

ಶ್ರೀ ಬಿ. ಶಿವಣ್ಣ.—ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟ ನ್ಯಾಷನಲ್ ಕಾನ್‌ಫೆರೆನ್ಸ್ ಇತ್ತು. ಈ ಕಾರ್ಮಿಕರ ಬಗ್ಗೆ ಕೂಡ ನಾನು ಮಾತನಾಡುತ್ತೇನೆ.

ರಾಜ್ಯದ ಎಲ್ಲಾ ಜಿಲ್ಲೆಯ ಕೇಂದ್ರ ಸ್ಥಳಗಳಲ್ಲಿ ಕಾರ್ಮಿಕರ ಫಿರ್ಯಾದುಗಳು

೪೨೦. ಶ್ರೀ ಕರಿಯಣ್ಣ (ಹೊಳೆಹೊನ್ನೂರು).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲಾ ಜಿಲ್ಲೆಯ ಕೇಂದ್ರ ಸ್ಥಳಗಳಲ್ಲಿ ಕಾರ್ಮಿಕ ಫಿರ್ಯಾದುಗಳ ವಿಚಾರಣೆಗೆ ಕಾರ್ಮಿಕ ನ್ಯಾಯಾಲಗಳು ಇವೆಯೇ ?

ಆ) ನ್ಯಾಯಾಲಯ ಇರುವ ಸ್ಥಳಗಳಲ್ಲಿ ಕಟ್ಟಡಗಳ ಸೌಕರ್ಯವು ಇದೆಯೇ ? ಮತ್ತು ಎಲ್ಲಾ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡಲಾಗಿದೆಯೇ ? ಎಷ್ಟು ಸ್ಥಳಗಳಲ್ಲಿ ನ್ಯಾಯಾಧೀಶರ ಹುದ್ದೆ ಖಾಲಿ ಇದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು).—

ಅ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ಕಾರ್ಮಿಕ ನ್ಯಾಯಾಲಯಗಳು ಇಲ್ಲ. ಪ್ರಸ್ತುತ ಈ ಕೆಳಗಿನ ಸ್ಥಳಗಳಲ್ಲಿ ಮಾತ್ರ ಕಾರ್ಮಿಕ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ.

೧) ಬೆಂಗಳೂರು	೪) ಮೈಸೂರು
೨) ಮಂಗಳೂರು	೫) ಗುಲ್ಬರ್ಗ
೩) ಚಿಕ್ಕಮಗಳೂರು	೬) ಹುಬ್ಬಳ್ಳಿ

ಆ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕ ನ್ಯಾಯಾಲಯಗಳಿಗೆ ಮತ್ತು ಔದ್ಯಮಿಕ ನ್ಯಾಯಾಲಯಗಳಿಗೆ ಕಟ್ಟಡದ ಸೌಕರ್ಯ ಇರುತ್ತದೆ.

ಬೆಂಗಳೂರಿನಲ್ಲಿರುವ ಹೆಚ್ಚುವರಿ ಔದ್ಯಮಿಕ ನ್ಯಾಯಾಧೀಕರಣ ಬಿಟ್ಟು ಎಲ್ಲಾ ಕಾರ್ಮಿಕ ನ್ಯಾಯಾಲಯಗಳಿಗೆ ಅಧ್ಯಕ್ಷಾಧಿಕಾರಿಗಳ ನೇಮಕ ಆಗಿದೆ.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಉತ್ತರದಲ್ಲಿ ೬ ಜಿಲ್ಲೆಗಳಲ್ಲಿ ನ್ಯಾಯಾಲಯಗಳು ಇವೆ ಎಂದು ತಿಳಿಸಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಏತಕ್ಕೆ ನ್ಯಾಯಾಲಯಗಳು ಇಲ್ಲವೆಂದು ದಯವಿಟ್ಟು ತಿಳಿಸಬೇಕು

ಶ್ರೀ ಬಿ. ಶಿವಣ್ಣ.—ಎಲ್ಲಾ ಜಿಲ್ಲೆಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಲಿಕ್ಕೆ ಆಗಲಿಲ್ಲ. ಆರ್ಥಿಕ ಸಮಸ್ಯೆ ಇದಕ್ಕೆ ಕಾರಣ. ಇನ್ನು ಮುಂದೆ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ವಿಚಾರ ಮಾಡಬಹುದು. ಈಗ ಆರು ಜಿಲ್ಲೆಗಳಲ್ಲಿ ಮಾತ್ರ ನ್ಯಾಯಾಲಯಗಳು ಇವೆ.

ಶ್ರೀ ಕರಿಯಣ್ಣ —ಎಲ್ಲಾ ಜಿಲ್ಲೆಗಳಲ್ಲಿ ನ್ಯಾಯಾಲಯ ಇಲ್ಲದೇ ಹೋದರೂ ಸಹಿತ ಅಲ್ಲಿ ನ್ಯಾಯಾಧೀಶರನ್ನಾದರೂ ಸಧ್ಯಕ್ಕೆ ಇಟ್ಟರೆ ಅಲ್ಲಿರತಕ್ಕಂಥ ಕಾರ್ಮಿಕರ ಕುಂದು ಕೊರತೆಗಳು ಬೇಗ ವಿಚಾರಣೆಯಾಗಿ ಅವರಿಗೆ ನ್ಯಾಯ ಸಿಗುತ್ತದೆ. ನ್ಯಾಯಾಧೀಶರೂ ಇಲ್ಲ, ನ್ಯಾಯಾಲಯವೂ ಇಲ್ಲವೆಂದರೆ ಏನು ಮಾಡಬೇಕು ? ಹೀಗಾದರೆ ಯಾವ ಪರಿಸ್ಥಿತಿಯಲ್ಲೂ ಕೇಸ್‌ಗಳು ತೀರ್ಮಾನವಾಗದೆ ಅವರು ಬೀದಿಪಾಲಾಗುತ್ತಾರೆ. ಇದಕ್ಕೆ ತಾವು ಪರ್ಯಾಯ ವ್ಯವಸ್ಥೆ ಏನು ಮಾಡುತ್ತೀರಿ ?

ಶ್ರೀ ಬಿ. ಶಿವಣ್ಣ.—ಈಗ ಆರು ನ್ಯಾಯಾಲಯಗಳಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡಿದ್ದೇವೆ ಬೆಂಗಳೂರಿನಲ್ಲಿ ಇರಲಿಲ್ಲ. ಅದಕ್ಕೆ...

ಶ್ರೀ ಕರಿಯಣ್ಣ.—ನಾನು ಅದನ್ನು ಕೇಳಲಿಲ್ಲ. ಆರು ಜಿಲ್ಲೆಗಳಲ್ಲಿ ಮಾಡಿದ್ದೇವೆ, ಇನ್ನುಳಿದ ಜಿಲ್ಲೆಗಳಲ್ಲಿ ಇಲ್ಲವೆಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ.ಬಾಕಿ ಜಿಲ್ಲೆಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಿಲ್ಲ, ಕೊನೆಯ ಪಕ್ಷ ಕೇಸ್‌ಗಳನ್ನು ತೀರ್ಮಾನ ಮಾಡುವುದಕ್ಕೆ ಬೇರೆ ಪರ್ಯಾಯ ವ್ಯವಸ್ಥೆ ಮಾಡಬೇಕು, ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಈ ರೀತಿ ಕಾರ್ಮಿಕರ ಸಮಸ್ಯೆ ಪ್ರಾರಂಭವಾದದ್ದು ೮ನೇ ತರಗತಿವರೆಗೂ ಇಸವಿಯಲ್ಲಿ ಈ ರೀತಿ ಕಾರ್ಮಿಕರ ಸಮಸ್ಯೆ ಶಿವಮೊಗ್ಗದಲ್ಲಿ ಪ್ರಾರಂಭವಾದದ್ದು ೮ನೇ ತರಗತಿವರೆಗೂ ಇಸವಿಯಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡಿದ್ದಾರೆ. ಅವರನ್ನು ೩ನೇ ಫ್ಲೋರಿಗೆ ಹಾಕಿದ್ದಾರೆ. ದುರಾದೃಷ್ಟವಶಾತ್ ಅವರಿಗೆ ಹೃದಯಘಾತ ಆಗಿದೆ, ಈಗ ೩ನೇ ಫ್ಲೋರ್‌ನಿಂದ ೨ನೇ ಫ್ಲೋರ್‌ಗೆ ನ್ಯಾಯಾಲಯವನ್ನು ತರುತ್ತಾರೆಂಬ ಸುದ್ದಿ ಬಂದಿದೆ. ಇದನ್ನು ಯಾವಾಗ ನ್ಯಾಯಾಧೀಶರು ಪರಿಶೀಲನೆ ಮಾಡಿ ಮುಗಿಸುತ್ತಾರೋ ಗೊತ್ತಿಲ್ಲ ಹಾಗೆಯೇ ಶಿವಮೊಗ್ಗದ ಭಾರತ್ ವರ್ಕರ್ಸ್‌ಸಮಸ್ಯೆ ೭ ವರ್ಷಗಳಿಂದ ಹಾಗೆಯೇ ನಿಂತಿದೆ. ಇದನ್ನು ಜಾಗ್ರತೆ ಇತ್ಯರ್ಥ ಮಾಡಿ ಕೊಡುವ ದೃಷ್ಟಿಯಿಂದ ಮಾನ್ಯ ಸಚಿವರು ಈ ಬಗ್ಗೆ ಕೂಡಲೇ ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಪರಿಶೀಲನೆ ಮಾಡುತ್ತೇನೆ.